Kannada Prabha

Date: 12-03-2021 Page No: 2

Edition: Mysore Language: Kannada




# ನಾಯಕತ್ವದಲ್ಲಿ ಮಹಿಳೆಯರು ಕುರಿತು ಆನ್‌ಲೈನ್ ಸಂವಾದ

**ಮೈಸೂರು:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರಿನ ಎಸ್‌ಡಿಎಂ-ಐಎಂಡಿ ಸಂಸ್ಥೆಯವರು ನಾಯಕತ್ವದಲ್ಲಿ ಮಹಿಳೆಯರು ಕುರಿತು ಆನ್‌ಲೈನ್ ಮುಖಾಂತರ ಸಂವಾದವನ್ನು ಆಯೋಜಿಸಿತ್ತು. ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಮಾತನಾಡಿ, ಪ್ರತಿ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಸೇರಿಸಿಕೊಳ್ಳುವುದು ಹಾಗೂ ಅವರಿಗೆ ವಿದ್ಯಾರ್ಥಿವೇತನವನ್ನು ನೀಡುವ ಮೂಲಕ ಸಂಸ್ಥೆಯು ಪ್ರೋತ್ಸಾಹ ನೀಡುತ್ತ ಬಂದಿದೆ ಎಂದು ಹೇಳಿದರು. ಈ ಸಂವಾದದಲ್ಲಿ ಡಾ.ಬಿ.ಆರ್. ಮಮತಾ, ಡಾ. ಆರತಿ ಬೆಹ್ಲ್, ಸವಿತಾ ಮಲ್ಲಪ್ಪ, ಡಾ. ಮೌಸುಮಿ ಸೇನ್ ಗುಪ್ತ ಪಾಲ್ಗೊಂಡಿದ್ದರು. ಸಂವಾದದ ಸಂಚಾಲಕರಾದ ಡಾ. ನೀತು ಗಣಪತಿ ಇದ್ದರು.